ಜಾನಪದ ಕಲೆಗಳ ಸಂರಕ್ಷಣೆ ಹಾಗೂ ಅಧ್ಯಯನ ದೃಷ್ಟಿಯಿಂದ ಜಾನಪದ ಕಲೆಗಳನ್ನು ಕುರಿತಂತೆ ಯುವಕ-ಯುವತಿಯರಿಗೆ ತರಬೇತಿ ನೀಡುವುದು ಇಂದಿನ ಸಂದರ್ಭದಲ್ಲಿ ಅವಶ್ಯವೆಂದು ಸಮಗ್ರ ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡು ಕಂಸಾಳೆ, ಪೂಜಾಕುಣಿತ, ಗೊರವರ ಕುಣಿತ, ಕಣಿವಾದನ, ಅಲಾಯಿ ಹೆಜ್ಜೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ ಮುಂತಾದ ಜಾನಪದ ಕಲೆಗಳ ಸಂಪನ್ಮೂಲ ವ್ಯಕ್ತಿಗಳ ಹಾಗೂ ಇತ್ಯಾದಿ ವೆಚ್ಚಗಳಿಗಾಗಿ ಒಟ್ಟಾರೆ ರೂ. 10,42,500/-ಗಳಿಗೆ ಯೋಜನೆ ರೂಪಿಸಲಾಗಿದೆ.

2. ಮಲೈ ಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪಿಸಲು 2.75 ಎಕರೆ ಜಮೀನನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಪರ್ದಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲಿಗೆ ಜಾನಪದ ಅಧ್ಯಯನ ಕೇಂದ್ರ ಸ್ಥಾಪಿಸಲು ಕಟ್ಟಡ ಕಾಮಗಾರಿಗಾಗಿ ನೀಲಿ ನಕಾಶೆ ಹಾಗೂ ಅಂದಾಜು ವೆಚ್ಚ ನೀಡುವಂತೆ ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

593 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಗುಂಡ್ಲುಪೇಟೆ ತಾಲ್ಲೂಕಿನ ಅರಣ್ಯ ಪ್ರದೇಶದ ಬಳಿ ಕಾಡು ಪ್ರಾಣಿಗಳು ಜಮೀನುಗಳಿಗೆ ನುಗ್ಗಿ ಬೆಳೆ ನಾಶಪಡಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ:

ಹೌದು,

ಆ) ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಅರಣ್ಯದಂಚಿನ ಪ್ರದೇಶದಲ್ಲಿ "ಆನೆ ತಡೆ ಕಂದಕ" ನಿರ್ಮಾಣ ಮಾಡಲು ಇಲಾಖೆ ಕೈಗೊಂಡಿರುವ ಕ್ರಮಗಳೇನು:

ಕಾಡು ಪ್ರಾಣಿಗಳು ಹಾವಳಿ ತಪ್ಪಿಸಲು ವನ್ಯಜೀವಿ ವಿಭಾಗ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಬರುವ ಗುಂಡ್ಲುಪೇಟೆ ತಾಲ್ಲೂಕಿನ ಮೋಯಾರು, ಬಂಡೀಪುರ, ಜಿ.ಎಸ್. ಬೆಟ್ಟ, ಮದ್ದೂರು, ಓಂಕಾರ ವಲಯಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಸುಮಾರು 112 ಕಿಮೀ. ಅರಣ್ಯ ಗಡಿಯು ರೈತರ ಜಮೀನಿನ ಅಂಚಿನಲ್ಲಿ ಬರುತ್ತಿದ್ದು, ಈ ಪೈಕಿ ಸುಮಾರು 100 ಕಿ.ಮೀ. ಉದ್ದದಷ್ಟು ಆನೆ ಕಂದಕ ಕಾಮಗಾರಿ ಮಾಡಲಾಗಿದೆ. ಬಾಕಿ 12 ಕಿ.ಮೀ. ನ್ನು 2009-10ನೇ ಸಾಲಿನಲ್ಲಿ ಆದ್ಯತೆ ಮೇರೆಗೆ ಕೈಗೊಳ್ಳಲಾಗುತ್ತಿದೆ.

ಕೊಳ್ಳೇಗಾಲ ವಿಭಾಗದ ವ್ಯಾಪ್ತಿಯ ಕೊಳ್ಳೇಗಾಲ, ಹನೂರು, ರಾಮಾಪುರ, ಮತ್ತು ಗುಂಡ್ಲುಪೇಟೆ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ಒಟ್ಟು 303.06 ಕಿ.ಮೀ ನಷ್ಟು ಆನೆ ಕಂದಕ ಕಾಮಗಾರಿ ಮಾಡಬೇಕಾಗಿದ್ದು, ಈ ಪೈಕಿ 59.13 ಕಿ.ಮೀ ಕಾಮಗಾರಿ ಮಾಡಲಾಗಿದೆ. ಬಾಕಿ 243.93 ಕಿ.ಮೀ ಕಾಮಗಾರಿ ಆದ್ಯತೆ ಮೇಲೆ ಕೈಗೊಳ್ಳಲಾಗುವುದು

ಇ) ಒಟ್ಟು ಎಷ್ಟು ಕಿ.ಮೀ ಆನೆ ತಡೆ ಕಂದಕ ನಿರ್ಮಿಸಬೇಕಾಗಿದೆ; ಈವರೆವಿಗೆ ಎಷ್ಟು ಕಿ.ಮೀ. ಆನೆ ತಡೆ ಕಂದಕ ನಿರ್ಮಿಸಲಾಗಿದೆ; ಉಳಿದ ಕಡೆ ಎಂದಿನಿಂದ ನಿರ್ಮಿಸಲಾಗುವುದು;

ಮೇಲಿನಂತೆ

ಈ) ಈಗಾಗಲೇ ಆನೆ ತಡೆ ಕಂದಕ ನಿರ್ಮಿಸಿ, ಹೂಳು ತುಂಬಿರುವ ಕಂದಕದಲ್ಲಿ ಕಂದಕದ ಪುನರ್ ನಿರ್ಮಾಣಕ್ಕೆ ಕೈಗೊಂಡಿರುವ ಕ್ರಮಗಳೇನು?

ಳು ತುಂಬಿರುವ ಆನೆ ತಡೆ ಕಂದಕಗಳನ್ನು ಸುಸ್ಥಿತಿಯಲ್ಲಿಡಲು ಹೂಳನ್ನು ಎತ್ತುವ ಯಗಾರಿ ಕೈಗೊಳ್ಳಲಾಗುತ್ತಿದೆ. 2009–10ನೇ ಸಾಲಿನಲ್ಲಿ ಸುಮಾರು 50.00 ಕಿ.ಮೀ. ನಷ್ಟು ಆನೆ ಕಂದಕವನ್ನು ದುರಸ್ಥಿ ಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

594 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
14–07–2009 ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಅರಣ್ಯದಂಚಿನ ಪ್ರದೇಶದ ರೈತರು ಕಂದಾಯ ಭೂಮಿಯಲ್ಲಿ ಬೆಳೆದ ಬೆಳೆಗಳನ್ನು ಕಾಡು ಪ್ರಾಣಿಗಳು ನಾಶ ಮಾಡಿದಾಗ ನೀಡಲಾಗುತ್ತಿರುವ ಪರಿಹಾರ ಮೊತ್ತ ಎಷ್ಟು (ಪ್ರತ್ಯೇಕವಾಗಿ ಪ್ರಮುಖ ಬೆಳೆಗಳಿಗೆ ನಿಗಧಿಪಡಿಸಿರುವ ಮೊತ್ತ);

ಕಾಡು ಪ್ರಾಣಿಗಳಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಮುಖ ಬೆಳೆಗಳಿಗೆ ಪ್ರತ್ಯೇಕವಾಗಿ ಬೆಲೆ ನಿಗಧಿಪಡಿಸಿ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. (ಅನುಬಂಧ–1)

ಆ) ನೀಡಲಾಗುತ್ತಿರುವ ಪರಿಹಾರ ಮೊತ್ತ ಬಹಳ ಕಡಿಮೆ ಇದ್ದು, ಇತ್ತೀಚಿನ ವೈಜ್ಞಾನಿಕ ದರದ ಆಧಾರದ ಮೇಲೆ ಪರಿಹಾರ ಮೊತ್ತ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ;

ಇ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಇತ್ತೀಚೆಗಷ್ಟೆ ಬೆಳೆ ಪರಿಹಾರದ ಮೊತ್ತವನ್ನು ಪರಿಷ್ಕರಿಸಿ ಆದೇಶ ಸಂಖ್ಯೆ ಅಪಜೀ 162 ಎಫ್‌ಡಿಬ್ಲ್ಯುಎಲ್ 2008 ದಿನಾಂಕ: 05–06–2009ನ್ನು ಹೊರಡಿಸಿದೆ. (ಅನುಬಂಧ–2)

ಅನುಬಂಧ–1
ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 05–06–2009.

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ),
ಅರಣ್ಯಭವನ, ಮಲ್ಲೇಶ್ವರಂ,
ಬೆಂಗಳೂರು.